

## ಮಾಡಲೇಬಾರದ ಎಂಟು ತಪ್ಪುಗಳು

- ಇನ್ನೇನು ಪರೀಕ್ಷೆ ಪ್ರಾರಂಭವಾಗುತ್ತದೆ ಎನ್ನುವವರೆಗೂ ಓದುತ್ತಲೇ ಇರಬೇಡಿ. ಅದು ಅನಗತ್ಯ ಒತ್ತಡಕ್ಕೆ ಸಿಕ್ಕು ಚೆನ್ನಾಗಿ ಓದಿರುವುದೂ ಮರೆತು ಹೋಗುತ್ತದೆ.
- ಪರೀಕ್ಷೆಯ ನಂತರ ಬರೆದ ಉತ್ತರಗಳ ಸರಿ–ತಪ್ಪುಗಳ ಬಗ್ಗೆ ಸಹಪಾಠಿಗಳೊಂದಿಗೆ ಚರ್ಚಿಸಬೇಡಿ. ಒಂದು ವೇಳೆ ತಪ್ಪಾಗಿ ಬರೆದಿದ್ದರೆ ನಿಮ್ಮ ಆತ್ಮವಿಶ್ವಾಸ ಕಡಿಮೆಯಾಗಿ ಮುಂದಿನ ದಿನಗಳ ಪರೀಕ್ಷೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ.
- ಪರೀಕ್ಷಾ ಕೊಠಡಿಯಲ್ಲಿ ಪ್ರಶ್ನೆಪತ್ರಿಕೆಯನ್ನು ಅವಸರದಲ್ಲಿ ಓದಿಕೊಳ್ಳಬೇಡಿ. ಅದಕ್ಕಾಗಿಯೆ ಸ್ವಲ್ಪ ಸಮಯವನ್ನು ಮೀಸಲಿಡಿ. ಪಿಯುಸಿ ವಿದ್ಯಾರ್ಥಿಗಳಿಗೆ ಅದಕ್ಕೆಂದೇ 15 ನಿಮಿಷ ಮೀಸಲಿದೆ.
- ಎಲ್ಲ ಪ್ರಶ್ನೆಗಳಿಗೂ ಸಾಧ್ಯವಾದಷ್ಟು ಉತ್ತರ ಬರೆಯಲು ಪ್ರಯತ್ನಿಸಿ. ಐದಾರು ಅಂಕಗಳ ಪ್ರಶ್ನೆಗಳಿಗೆ ಹಂತ ಹಂತದ ಗೊತ್ತಿರುವ ಅರ್ಧ ಉತ್ತರ ಬರೆದರೂ 2–3 ಅಂಕಗಳು ದೊರೆಯುವ ಸಾಧ್ಯತೆಗಳಿರುತ್ತವೆ.
- ಯಾವುದಾದರೂ ಪ್ರಶ್ನೆಗೆ ಉತ್ತರ ಹೊಳೆಯದಿದ್ದಲ್ಲಿ ಅದನ್ನು ಬಿಟ್ಟು ಗೊತ್ತಿರುವ ಪ್ರಶ್ನೆಗೆ ಉತ್ತರ ಬರೆಯಿರಿ.
- ಯಾವುದೇ ಕಾರಣಕ್ಕೂ ಯಾವುದೇ ರೂಪದ ನಕಲು ಮಾಡಬೇಡಿ.
- ಪರೀಕ್ಷೆ ಮುಗಿಯುವುದಕ್ಕೂ ಮುನ್ನ ಕೊಠಡಿಯಿಂದ ಹೊರಬರಬೇಡಿ.
- ಎಲ್ಲಾ ಪ್ರಶ್ನೆಗಳನ್ನು ಅಟೆಂಪ್ಟ್ ಮಾಡಿ. ಒಂದು ವೇಳೆ ಪ್ರಶ್ನೆ ತಪ್ಪಾಗಿ ಮುದ್ರಣಗೊಂಡಿದ್ದರೆ ಕೃಪಾಂಕ (ಗ್ರೇಸ್ ಮಾರ್ಕ್ಸ್) ದೊರೆಯುತ್ತವೆ.

SSLC-PUC

ಆತನ ಪೂರ್ವಾಶ್ರಮದ ಕತೆ ಎಲ್ಲರಿಗೂ ಗೊತ್ತಿದೆ. ಪರೀಕ್ಷೆ ಪಾಸು ಮಾಡಲು ಕಠಿಣ ಶ್ರಮಪಡುವ ನಮ್ಮ ವಿದ್ಯಾರ್ಥಿಗಳೂ ಸಹ ಸಾಮಾನ್ಯಜ್ಞಾನದ (ಕಾಮನ್ ಸೆನ್ಸ್) ಕೊರತೆಯಿಂದಾಗಿ ಪರೀಕ್ಷೆಗಳಲ್ಲಿ ನಿರೀಕ್ಷಿತ ಯಶಸ್ಸು ಪಡೆಯುವುದಿಲ್ಲ ಎಂಬ ಮಾತಿದೆ.

### ಪರೀಕ್ಷಾ ಪೂರ್ವ ತಯಾರಿ

ವರ್ಷದುದ್ದಕ್ಕೂ ಶಾಲೆ–ಕಾಲೇಜುಗಳಲ್ಲಿ ಮಾಡಿದ ಪಾಠ–ಪದ್ಯಗಳು, ಬರೆಸಿದ ಪ್ರಶ್ನೋತ್ತರಗಳು, ಪ್ರಯೋಗಾಲಯದಲ್ಲಿ ಕೈಗೊಂಡ ಪ್ರಯೋಗಗಳು, ಶೈಕ್ಷಣಿಕ ಪ್ರವಾಸದಲ್ಲಿ ಸಂದರ್ಶಿಸಿದ ವಿವಿಧ ಸ್ಥಳಗಳ ಬಗ್ಗೆ ಸಂಗ್ರಹಿಸಿದ ಮಾಹಿತಿಗಳು... ಇತ್ಯಾದಿಗಳನ್ನು ನೆನಪಿಟ್ಟುಕೊಂಡು ಕಲಿತ ವಿವಿಧ ವಿಷಯಗಳ ಪಾಠಗಳ ಮೇಲೆ ಕೇಳಲಾಗುವ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಉತ್ತರ ಬರೆಯಬೇಕಾಗುತ್ತದೆ. ವಾರ್ಷಿಕ ಪರೀಕ್ಷೆಗಿಂತ ಮುಂಚೆ ಶಾಲೆ–ಕಾಲೇಜುಗಳಲ್ಲಿ ಪ್ರತಿ ತಿಂಗಳೂ ಕಿರು ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಜೊತೆಗೆ ಮಧ್ಯವಾರ್ಷಿಕ ಮತ್ತು ಪ್ರಿಪರೇಟರಿ ಪರೀಕ್ಷೆಗಳೂ ಇರುತ್ತವೆ. ಬರಲಿರುವ ಮುಖ್ಯ ಪರೀಕ್ಷೆ ಬರೆಯಲು ಆತ್ಮವಿಶ್ವಾಸದಿಂದ ಇರಲಿ ಎಂಬ ಉದ್ದೇಶದಿಂದ ಅನೇಕ ತರಗತಿ ಮಟ್ಟದ ಟಾಪಿಕ್ ವೈಸ್ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಇದು ಶಾಲೆಗಳು ನೀಡುವ ತಯಾರಿಯ ಭಾಗ. ವಿದ್ಯಾರ್ಥಿಯು ಸಹ ವಾರ್ಷಿಕ ಪರೀಕ್ಷೆ ಎದುರಿಸಲು ತನ್ನದೇ ತಯಾರಿ ಮಾಡಿಕೊಳ್ಳಬೇಕಾಗುತ್ತದೆ. ಅದು ಹೀಗಿದ್ದರೆ ಸರಿ.

- ದಿನವೊಂದಕ್ಕೆ ಎಷ್ಟು ಗಂಟೆಗಳ ಕಾಲ ಯಾವ, ಯಾವ ವಿಷಯಗಳನ್ನು ಕಲಿಯಬೇಕೆಂಬುದರ ಬಗ್ಗೆ ವಿಷಯವಾರು ಸ್ಟಡೀ ಟೈಮ್ ಟೇಬಲ್‌ನ್ನು ತಯಾರಿಸಿಕೊಂಡು ಅದನ್ನು ತಪ್ಪದೆ ಅನುಸರಿಸಬೇಕು. ಈಗಾಗಲೇ ಲಭ್ಯವಿರುವ ನೋಟ್ಸ್, ಗೈಡ್ ಮತ್ತು ಪಠ್ಯಪುಸ್ತಕಗಳನ್ನೇ ಓದಬೇಕು.
- ಕಳೆದ ವರ್ಷಗಳ ಪ್ರಶ್ನೆಪತ್ರಿಕೆ ಹಾಗೂ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಕೂಲಂಕಷವಾಗಿ ನೋಡಿ ಯಾವ ವಿಷಯ/ ಪಾಠದ ಬಗ್ಗೆ ಹೆಚ್ಚಿನ ಪ್ರಶ್ನೆಗಳಿವೆ ಎಂಬುದನ್ನು ಮೊದಲು ಗಮನಿಸಿ. ನಂತರ ನಿಮಗೆ ಸುಲಭವೆನ್ನಿಸುವ ವಿಭಾಗಗಳ ಪ್ರಶ್ನೆಗಳಿಗೆ ಉತ್ತರ ಬರೆಯುವುದನ್ನು ಕಲಿಯಿರಿ.
- ಪಠ್ಯಪುಸ್ತಕದಲ್ಲಿ ಬಿಡಿಸಲಾದ ಪ್ರಶ್ನೆಗಳೇ ಪ್ರಶ್ನೆಪತ್ರಿಕೆಯಲ್ಲಿ ಬರುವ ಸಾಧ್ಯತೆಗಳು ಹೆಚ್ಚು. ಆದ್ದರಿಂದ ಟೆಕ್ಸ್ಟ್ ಬುಕ್‌ನ ಎಲ್ಲಾ ವರ್ಕ್ಸ್ ಎಕ್ಸಾಂಪಲ್‌ಗಳನ್ನು ಪ್ರತ್ಯೇಕವಾಗಿ ಬರೆದುಕೊಂಡು ಅಭ್ಯಸಿಸಿರಿ.
- ಪ್ರಶ್ನೆಗಳಿಗೆ ಉತ್ತರ ಹುಡುಕುವ ಬದಲು, ಪಠ್ಯದಲ್ಲಿರುವ ಪಾಠವನ್ನು ಪೂರ್ಣವಾಗಿ ಓದಿದ ನಂತರ ಪ್ರಶ್ನೆಗಳ ಕಡೆ ಗಮನಹರಿಸಿ ಉತ್ತರಗಳನ್ನು ಕಲಿಯಬೇಕು.
- ಯಾವುದನ್ನೇ ಓದಿದರೂ ಅರ್ಥಮಾಡಿಕೊಳ್ಳುತ್ತ ಓದಬೇಕು. ಅರ್ಥಮಾಡಿಕೊಂಡದ್ದನ್ನು ಬರೆಯಬೇಕು. ನಂತರ ನೆನಪಿಟ್ಟುಕೊಳ್ಳುವ ಪ್ರಯತ್ನ ಮಾಡಬೇಕು.
- ಯಾವುದಾದರೂ ವಿಷಯ ಅರ್ಥವಾಗದಿದ್ದರೆ, ತಿಳಿದವರ ಬಳಿ ಅದನ್ನು ಹೇಳಿಸಿಕೊಳ್ಳಬೇಕು. ಮನೆಯಲ್ಲಿನ ಹಿರಿಯರಿಂದ ಅದು ಸಾಧ್ಯವಾಗದಿದ್ದರೆ, ಮನೆಯ ಬಳಿಯೇ ಇರುವ ಅಧ್ಯಾಪಕರ ನೆರವು ಪಡೆಯಬೇಕು.
- ವಿಶ್ರಾಂತಿಯಿಲ್ಲದೆ ದಿನಗಟ್ಟಲೇ ಓದಬೇಡಿ. ಗಂಟೆ ಎರಡು ಗಂಟೆಗಳಿಗೊಮ್ಮೆ ಮೆದುಳಿಗೆ ವಿಶ್ರಾಂತಿ ಕೊಡಿ. ಒತ್ತಡದ ಸಮಯದಲ್ಲಿ ಮೆದುಳಿಗೆ ಹೆಚ್ಚಿನ ಪ್ರಮಾಣದ ಆಮ್ಲಜನಕ ಬೇಕಾಗುತ್ತದೆ. ಒಂದೆರಡು ಗಂಟೆ ಓದಿದ ನಂತರ ಕುಳಿತಲ್ಲಿಂದ ಎದ್ದು ಓಡಾಡಿ.
- ಮನೆಯ ಅಂಗಳ ವಿಶಾಲವಾಗಿದ್ದರೆ, ಶಬ್ದಮಾಲಿನ್ಯದಿಂದ ಮುಕ್ತವಾಗಿದ್ದರೆ ಅಲ್ಲಿ ತುಸು ಸಮಯ ಕಳೆಯಿರಿ. ಬಿಡುವಿನಲ್ಲಿ ದಿನಪತ್ರಿಕೆಗಳ ತಲೆಬರಹದ ಕಡೆ ಕಣ್ಣು ಹಾಯಿಸಿರಿ.
- ಟೀವಿಯಲ್ಲಿ ಪರೀಕ್ಷೆ ಕುರಿತು ಪ್ರಸಾರವಾಗುವ ಸಂವಾದ, ಚರ್ಚೆ, ಪ್ರಶ್ನೋತ್ತರಗಳನ್ನು ನೋಡಿರಿ. ಅನುಮಾನಗಳಿದ್ದರೆ ಪ್ರಶ್ನೆ ಕೇಳಿ ಉತ್ತರ ಪಡೆದುಕೊಳ್ಳಿ.